**ಓ.ಎಸ್. ನಂಃ 39/2017**
**ಪಿ.ಡಬ್ಲ್ಯೂ - 2**

**ಸಾಕ್ಷಿಗೆ ತೆಲಗು ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ ಎನ್.ಬಿ.ಎ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿಕೊಂಡು ಅವರಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ದಿನಾಂಕಃ 19-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಜಿ.ಬಿ.ಎನ್ ವಕೀಲರಿಂದಃ**

ನಾನು ಬನ್ನಮ್ಮ, ದೇವಪ್ಪ, ವಿಜಯಮ್ಮ, ಮರೆಪ್ಪ, ಮಲ್ಲಪ್ಪ, ಗೀತಾ, ಸಾಬಪ್ಪ, ಬನ್ನಪ್ಪ ರವರ ವಿರುದ್ಧ ಈ ದಾವೆ ದಾಖಲಿಸಿರುತ್ತೇನೆ. 7 ನೇ ಪ್ರತಿವಾದಿ ವಿಜಯಮ್ಮ ರವರ ಗಂಡನ ಹೆಸರು ದೇವಪ್ಪ ಎಂದು ಇರುತ್ತದೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದೇವಪ್ಪ ಮರಣಹೊಂದಿರುತ್ತಾರೆ ಎಂದರೆ ಸರಿ. ನಾವು ವಾದ ಪತ್ರದಲ್ಲಿ 7 ನೇ ಪ್ರತಿವಾದಿಯ ಗಂಡನ ಹೆಸರನ್ನು ಪೋಲಪ್ಪ ಎಂದು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ವಿಜಯಮ್ಮ ಗಂಡ ದೇವಪ್ಪ ರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಮಗಳು ಇರುತ್ತಾರೆ. ಬನ್ನಪ್ಪ, ಸಾಬಪ್ಪ ಮತ್ತು ಗೀತಾ ಸದರಿ ವಿಜಯಮ್ಮ ಗಂಡ ದೇವಪ್ಪ ರವರ ಮಕ್ಕಳಾಗಿರುತ್ತಾರೆ.

2. ನೀವು ನಾರಾಯಣಪೇಟೆ ಜಿಲ್ಲೆಯ ಮಕ್ತಲ್ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೀರಾ ಎಂದರೇ ಸಾಕ್ಷಿಯು ಮಕ್ತಲ್ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದು, ನಂತರ ಹೈದ್ರಾಬಾದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಈಗಲೂ ಸಹ ಸದರಿ ಮಕ್ತಲ್ ಗ್ರಾಮದಲ್ಲಿ ವಾಸವಾಗಿದ್ದೇನೆಂದರೆ ಸರಿ. ಕಳೆದ ಹತ್ತು ವರ್ಷಗಳಿಂದ ಮಕ್ತಲ್ ಗ್ರಾಮದಲ್ಲಿ ವಾಸವಾಗಿದ್ದೇನೆ.

3. ನನ್ನ ಗಂಡನ ಪಾಲು ನಮಗೆ ಬರಬೇಕೆಂದು ಈ ದಾವೆ ದಾಖಲು ಮಾಡಿರುತ್ತೇವೆ. ದಾವಾ ಆಸ್ತಿಯ ಸರ್ವೆ ನಂಬರು ನನಗೆ ಗೊತ್ತಿಲ್ಲ, ಆದರೆ ಮೂರು

ಜಮೀನುಗಳಿಗೆ ಸಂಬಂಧಿಸಿದಂತೆ ದಾವೆ ದಾಖಲು ಮಾಡಿರುತ್ತೇವೆ. ದಾವಾ ಆಸ್ತಿಗಳ ಜಮೀನು ಕ್ಷೇತ್ರ ಗೊತ್ತಿದೆಯೇ ಎಂದರೆ ಸಾಕ್ಷಿ ಒಟ್ಟು 09 ಎಕರೆ ಇದೆ ಎಂದು ನುಡಿಯುತ್ತಾರೆ. ದಾವಾ ಅಸ್ತಿಗಳು ನೀಲಹಳ್ಳಿ ಗ್ರಾಮದಲ್ಲಿ ಇದ್ದಾವೆ. 2 ರಿಂದ 7ನೇ ಪ್ರತಿವಾದಿಯರು ಈಗಾಗಲೇ ವಿಭಾಗ ಮಾಡಿಕೊಂಡು ತಮ್ಮ ತಮ್ಮ ಆಸ್ತಿಗಳ ಪ್ರತ್ಯೇಕ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನನ್ನ ಗಂಡನ ಜೀವಿತಾ ಕಾಲದಲ್ಲಿಯೇ ಸಮಾ ನಾಲ್ಕು ಪಾಲುಗಳಾಗಿ ವಿಭಾಗ ಮಾಡಿಕೊಂಡಿದ್ದರು, ಆದರೆ ನನಗೆ ತಿಳಿಯದಂತೆ ಸದರಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈಗ ಸುಮಾರು 10 ವರ್ಷಗಳ ಹಿಂದೆ ಸದರಿ ವಿಭಾಗ ಆಗಿರುತ್ತದೆ. ನನ್ನ ಗಂಡ ಬಂಗಾರಪ್ಪ 2009 ರಲ್ಲಿ ಮರಣಹೊಂದಿದ್ದರು. ದಿನಾಂಕ 25.05.2009 ರಂದು ನನ್ನ ಗಂಡ ಮರಣಹೊಂದಿದ್ದಾರೆ. ನಿಮ್ಮ ಗಂಡನ ಜೀವಿತಾ ಕಾಲದಲ್ಲಿ ವಿಭಾಗ ಆಗಿದ್ದರೇ ಅವರ ಹೆಸರಿಗೆ ಹಕ್ಕು ಬದಲಾವಣೆ ಆಗಬೇಕಾಗಿತ್ತು ಎಂದರೇ ಸಾಕ್ಷಿಯು ನನ್ನ ಗಂಡ ಹಕ್ಕು ಬದಲಾವಣೆ ಮಾಡಿಸಿಕೊಂಡು ಬರುತ್ತೇನೆ ಎಂದು ಹೋಟ ಮದ್ಯಪಾನ ಮಾಡಿ ಬರುತ್ತಿದ್ದರು ಎಂದು ನುಡಿಯುತ್ತಾರೆ. 2 ರಿಂದ 7ನೇ ಪ್ರತಿವಾದಿಯರ ಹೆಸರಿಗೆ ಆಗಿರುವ ಹಕ್ಕು ಬದಲಾವಣೆ ತಪ್ಪಾಗಿದೆ ಎಂದು ನಾನು ಈವರೆಗೆ ಪ್ರಶ್ನೆ ಮಾಡಿಲ್ಲ. ನಿಮ್ಮ ಗಂಡನ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ನಾವು ನಮ್ಮ ಕುಟುಂಬದ ವಂಶವೃಕ್ಷದ ದೃಡೀಕರಣ ಪತ್ರವನ್ನು ಕಂದಾಯ ಇಲಾಖೆಯಿಂದ ಪಡೆದು ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ಗಂಡನ ಕುಟುಂಬದ ಮೂಲ ಪುರುಷ ಬಂಗಾರಪ್ಪ ಎಂದು ಇದ್ದರು. ಸದರಿ ಮೂಲ ಪುರುಷನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ಬಂಗಾರಪ್ಪ ರವರಿಗೆ ಇಬ್ಬರು ಮಕ್ಕಳು ಇದ್ದರು. ನನ್ನ ಗಂಡನ ತಂದೆಯ ಹೆಸರು ಪೋಲಪ್ಪ ಎಂದು ಇರುತ್ತದೆ, ಆದರೆ ಮೂಲ ಪುರುಷನ ಇನ್ನೊಬ್ಬ ಮಗನ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವ ಪೋಲಪ್ಪ ರವರಿಗೆ 04 ಜನ ಗಂಡು ಮಕ್ಕಳು ಹಾಗೂ 02 ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು 06 ಜನ ಮಕ್ಕಳು ಇದ್ದರು. ಸರೋಜಾ ಮತ್ತು ಲಕ್ಷ್ಮೀ ರವರು ನನ್ನ ಗಂಡನ ಸಹೋದರಿಯರು ಆಗಿರುತ್ತಾರೆ. ಆ ಪೈಕಿ ಲಕ್ಷ್ಮೀ ರವರು ಮರಣಹೊಂದಿದ್ದು, ಸರೋಜಾ ರವರು ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಲಕ್ಷ್ಮೀ ರವರಿಗೆ ಇಬ್ಬರು ಗಂಡು

ಮಕ್ಕಳು ಇದ್ದು, ಸದರಿಯವರು ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಸದರಿ ಸರೋಜಾ ಮತ್ತು ಲಕ್ಷ್ಮೀ ರವರ ವಾರಸುದಾರರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ವಾದ ಪತ್ರದ ವಂಶಾವಳಿಯಲ್ಲಿ ಪೋಲಪ್ಪ ರವರ ಹೆಣ್ಣು ಮಕ್ಕಳ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಮಲ್ಲಪ್ಪ ರವರನ್ನು ಸಿದ್ದಪ್ಪ ಎನ್ನುವವರಿಗೆ ದತ್ತಕ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸರಿ, ಆದರೆ ಮಲ್ಲಪ್ಪ ಈಗ ನನ್ನ ಗಂಡನ ಕುಟುಂಬದಲ್ಲಿಯೇ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯವಕಾಶ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ